ಬ್ಯಾಡಂದಿರೋ ಅಡ್ಡಿಲ್ಲ... ಡಿಟೇಕ್ಟಿವ್ ಆಗುವಂತೆ ಒತ್ತಾಯ. ಅವೆಲ್ಲಾ ತಲಿಬ್ಯಾನಿ ಡಿಲೀಟ್ ಮಾಡಿ ನಿಟ್ಟುಸಿರು ಬಿಡೋದ್ರಾಗ ಒಂದು ಸಾವಿನ ಸುದ್ದಿ .ಆ ಸುದ್ದಿಯನ್ನ ನೋಡಿ ಲೈಕ್ ಮಾಡುವ ಮೂರ್ಖರು. ಆ ಸಾವಿನ ಸುದ್ದೀ ಕೆಳಗ ರಿಪ್ ರಿಪ್(ರೆಸ್ಟ್ ಇನ್ ಪೀಸ್) ಅನ್ನೋ ಒಕ್ಕಣಿ ಬರೆಯುವ ಸೋಂಬೇರಿಗಳು ಎಲ್ಲಾರದೂ ಈ ಫೇಸ್‌ಬುಕ್ಕಿನೂರಿನ್ಯಾಗ ವಾಸ. ಒಮ್ಮೊಮ್ಮೆ ಸಾವೊಂದು ಬಾಜೂಕಿನ ಮನ್ಯಾಗ ಆದರೂ ತಿಳಿಯೋದು ಫೇಸ್‌ಬುಕ್ಕಿನ ಮೂಲಕ... ಕೆಲವೊಮ್ಮೆ ಫೇಸ್‌ಬುಕ್ಕಿಗಿಂತ ವೈಯಕ್ತಿಕ ಪರಿಚಯ ಚೊಲೋ ಅನಿಸಿದರೂ ಆ ವ್ಯಕ್ತಿಯ ಬಗ್ಗೆ ಲೇಟೆಸ್ಟ್ ಅಪ್ಡೇಟ್ ಬೇಕಾಗಿದ್ದರ ಫೇಸ್‌ಬುಕ್ಕು ನೋಡೋದು ವಾಸಿ ಅನಸತದ. ನನ್ನ ಸ್ನೇಹಿತನ ಬಾಜೂಕ ಕೂಡುವ ಸಹೋದ್ಯೋಗಿಯೊಬ್ಬರ ಡೈವೋರ್ಸ್ ಆಗಿ ಮತ್ತೊಂದು ಲಗ್ನನೂ ಆಗಿದ್ದು ಈ ಎಲ್ಲ ಅವಾಂತರದೊಳಗ ಆ ಮನಿಷಾ, ಪಾಪ ಖಿನ್ನತೆಗೆ ಒಳಗಾಗಿ ಕೌನ್ಸೆಲಿಂಗ್ ತೊಗೊಂಡಿದ್ದು... ಇದಾವ ಸುದ್ದೀನೂ ಒಟ್ಟ ಆಫೀಸಿನ ಮಂದಿಗೆ ಯಾರಿಗೂ ತಿಳಿವಿಗೆ ಬಂದಿರಲೇ ಇಲ್ಲ... ಬಂದಿದ್ದೊಂದs ಆತನ ಸಾವಿನ ಸುದ್ದಿ. ಪಾಪ... ನೋಡ್ರೀ... ಫೇಸ್‌ಬುಕ್ಕಿನ ಮ್ಯಾಲೇನೂ ಅಂವಾ ಗೋಳ್ಯಾಡಿರಲಿಲ್ಲ... ಎಂಥಾ ಜೀವನ್ಮುಖಿ ಬರಹಗಳೂ, ಸಂಗೀತವೂ ಆತನ ಫೇಸ್‌ಬುಕ್ಕಿನ ಹಾಳೀ ಮ್ಯಾಲೆ ಇದ್ದವು.ಆ ಹಾಳೀ ಓದೋದು ಬಿಟ್ಟು ವೈಯಕ್ತಿಕವಾಗಿ ಆತ್ಮೀಯತೆಯಿಂದ ಮಾತಾಡಿಸುವ ತಾಳ್ಮೆ ಯಾರಿಗಿರತದ?!...

ತಾಳ್ಮೆ ಕೆಡೋ ಅಂಥ ಸುದ್ದಿಯಂತೂ ಈಗೀಗ ಭಾಳs ಬರತಾವ, ಈ ಮೊಗ ಹೊತ್ತಿಗಿ ವಳಗ! ಒಂದೆರಡು ವಾರದ ಹಿಂದಿನ ತನಕ ನನ್ನ ಹಾಂಗ ಇದ್ದ ನನ್ನ ಗೆಳತಿ ಏಕದಂ ಥೆಳ್ಳಗಾಗಿ ಮೂವತ್ತು ಕಿ.ಮೀ ಮಾರಥಾನ್ ಓಡಿದಳಂದರ ತಾಳ್ಮೆ ಕೆಡತದೋ ಇಲ್ಲೋ? ಆರಾಮಾಗಿ, ಸತ್ತಂತಿರುವ ನನ್ನ ತೆಳ್ಳಗಾಗುವ ಛಲವನ್ನು ಬಡಿದೆಬ್ಬಿಸುವ ಪ್ರಯತ್ನವನ್ನು ಈ ಮಾಯಾ ಜಗತ್ತು ಮಾಡಲೀಖತ್ತದ ಅಂತ ಅನಿಸಿ ಸ್ವಲ್ಪ ಹೊತ್ತು ತಲೀಕೆಡತದ. ಅಷ್ಟರಾಗs ವಿದ್ವಾನ್ ಮಂದಿಯದೇನೋ, ಗಂಧ ತೀಡಿಧಾಂಗ ಜಗಳ ಸುರು ಆಗತದ. ಅದನ್ನ ಓದಿಕೋತ ಸಮಯವನ್ನ ಸಾವಕಾಶೆ ಕೊಲ್ಲತಿರಬೇಕಾದರ... ಓಹೋ... ಶುಭಶ್ರೀ ಮೆಸೇಜು ಬಂತು!... ಮತ್ತೊಮ್ಮೆ ಫ್ರೆಂಡ್ಸ ಆದಿವಿ. ಸಮಯ ಸಾಯಲಿಕ್ಕೆ ಸಮಯ ಹಿಡೀಲಿಲ್ಲ. ಸಮಯಕ್ಕೇನು?... ಒಂದು ಕ್ಷಣ ಸತ್ತರ, ಕ್ಷಣದಾಗ ಇನ್ನೊಂದು ಕ್ಷಣ ಹುಟ್ಟಿಬಿಡತದ... ಯುಗಾದಿಗೇನು ... ಯುಗಯುಗಗಳಿಂದ ಬರಲಿಕ್ಕೆ ಹತ್ತೇದ... ಶುಭಶ್ರೀ ಮೆಸ್ಸೇಜು ಈಗಷ್ಟs ಬಂದದ... ನಾ ಉತ್ತರಿಸಲಿಲ್ಲ ಅಂದರ... ಸಕ್ಕರಿ ಗುಡ್ಡ ಸೆಟಗೋತದ.

## ಜಾಹ್ನವಿ ಆನಂದ ಹಳ್ಳೂರ

ಮೂಲತಃ ಗದುಗಿನ ಕೋಳಿವಾಡವಾದರೂ ಹುಟ್ಟಿದ್ದು ಬೆಳೆದಿದ್ದು ಬೆಂಗಳೂರಿನಲ್ಲಿ. ಪ್ರಸ್ತುತ ಅಮೆರಿಕದ ಪೆನ್ಸಿಲ್ವೇನಿಯಾ ರಾಜ್ಯದಲ್ಲಿ ವಾಸ. ವಿದ್ಯಾಭ್ಯಾಸ ಬೆಂಗಳೂರಿನಲ್ಲಿ . ಬಿಕಾಂ ನಂತರ ಎನ್.ಐ.ಐ.ಟಿ.ಯಲ್ಲಿ ಕಂಪ್ಯೂಟರ್ ಡಿಪ್ಲೋಮಾ. ಬಳಿಕ ಬೆಂಗಳೂರು ವಿಶ್ವವಿದ್ಯಾಲಯದ ಶೇಷಾದ್ರಿಪುರದ ಕನ್ನಡ ಅಧ್ಯಯನ ಕೇಂದ್ರದಿಂದ ಕನ್ನಡದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಎಂಟು ವರ್ಷಗಳ ಕಾಲ ಕನ್ನಡೇತರರಿಗಾಗಿ ಕನ್ನಡ ತರಬೇತಿ ಶಿಬಿರಗಳನ್ನು, ತರಗತಿಗಳನ್ನು ನಡೆಸಿದ್ದಾರೆ. ಕನ್ನಡ ಶಿಕ್ಷಕಿಯಾಗಿಯೂ ಕೆಲಸ ಮಾಡಿದ್ದಾರೆ.